ಕೆ.ಎಂ. ಲಿಂಗರಾಜು, ನಂಜನಗೂಡು

*ಭಾರತದಲ್ಲಿ ಜಾತಿ ವಿನಾಶವಾದರೆ ನಮ್ಮ ಪುಢಾರಿಗಳ ಗತಿಯೇನು?*



ಚಿಂತಿಸಬೇಡಿ. ಹಂದಿ ಒಂದು ತಿಪ್ಪೆ ಖಾಲಿಯಾದರೆ ಇನ್ನೊಂದನ್ನು ಹುಡುಕಿಕೊಳ್ಳುತ್ತದೆ.

ದಿನೇಶ್, ಗುಡ್ಡದೂರು

*ಬಾರ್‌ಗಳಲ್ಲೇಕೆ ಮಬ್ಬು ಬೆಳಕಿನ ದೀಪವನ್ನು ಹಾಕಿರುತ್ತಾರೆ?*

ಅಕ್ಕಪಕ್ಕದ ಟೇಬಲ್‌ಗಳಲ್ಲಿ ಅಪ್ಪ ಮಕ್ಕಳು ಇರುವ ಸಾಧ್ಯತೆ ಇರುವುದರಿಂದ ಅಸ್ಪಷ್ಟತೆ ಅಗತ್ಯವಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಕಳ್ಳನಿಗೆ ಶಿಕ್ಷೆ ಆಗದಂತೆ ನೋಡಿಕೊಂಡ ವಕೀಲನಿಗೆ ಆತ್ಮಸಾಕ್ಷಿ ಇರುವುದಿಲ್ಲವೆ?*

ಕೊಲ್ಲುವ ಸೈನಿಕನಿಗೆ ದಯೆ ಇರುವುದಿಲ್ಲವೆ? ವೃತ್ತಿಧರ್ಮ ಆತ್ಮಸಾಕ್ಷಿಗಿಂತಲೂ ದೊಡ್ಡದು.

ವೈ. ಧನಪಾಲ್ ಪ್ರಸಾದ್, ಮಂಡ್ಯ

*ದೇವರು ಸೃಷ್ಟಿಸಿದ ಬೆಳಕು, ಗಾಳಿ, ನೀರು. ಉಚಿತ. ಆದರೆ ನೀರಿಗೆ ತೆರಿಗೆ ಯಾಕೆ?*




ಆ ದೇವರು ಸೃಷ್ಟಿಸಲು ಮರೆತ ಕೆರೆ, ಜಲಾಶಯ, ಪೈಪು, ನಲ್ಲಿಗಳಿಗೆ ಸರ್ಕಾರ ಹಣ ಕೊಟ್ಟಿರುವುದರಿಂದ.

ಎಂ.ಬಿ. ರಂಗಪ್ಪಶೆಟ್ಟಿ. ಮೋಕಾ

*‘ಜನಪ್ರತಿನಿಧಿಗಳ ವೈಭವದ ಜೀವನ ಪ್ರಜಾದ್ರೋಹ’ ಎಂದ ಮಹಾತ್ಮಾ ಗಾಂಧಿಯವರ ಮಾತುಗಳು ಈಗ ಎಷ್ಟು ಪ್ರಸ್ತುತ?*

ಜನಪ್ರತಿನಿಧಿ? ಯಾರವರು? ಎಲ್ಲಿದ್ದಾರೆ? ಈಗ ಇರುವವರೆಲ್ಲ ಲಿಕ್ಕರ್, ಟಿಂಬರ್, ಜಾತಿ ಲಾಬಿಯ ಪ್ರತಿನಿಧಿಗಳಷ್ಟೆ.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

*ಮುಂದಿನ ದಿನಗಳಲ್ಲಿ ಪರೀಕ್ಷೆ ಬರೆಯದೆ ಪಾಸು ಮಾಡುವ ಭಾಗ್ಯ ಬರಬಹುದೆ?*

ಇದೆಂತಹ ಚಿಲ್ರೆ ಆಸೆ ನಿಮ್ಮದು! ‘ಗೀರ್ವಾಣಿ’ ಸಮ್ಮಾನ್ ಪ್ರಶಸ್ತಿಯೇ ದೊರಕುವ ಸಾಧ್ಯತೆಯಿದೆಯಂತೆ...

ಹನುಮಂತಪ್ಪ ಕೊಳಗಿ, ಸಾಗರ

*ಒಮ್ಮೆಯೂ ಮಗ ಹೊಟ್ಟೆ ತುಂಬ ಉಣ್ಣಲಿಲ್ಲವೆಂದು ನೊಂದ ತಂದೆ ಮತ್ತು ತನ್ನನ್ನವನ್ನು ನನಗಿತ್ತ ತಾಯಿಯ ಋಣ ತೀರಿಸುವುದೆಂತು?*

ಅದೇ ಸಂಸ್ಕಾರವನ್ನು ಪಡೆದು, ಮುಂದಿನ ಪೀಳಿಗೆಗೆ ವರ್ಗಾಯಿಸುವುದರ ಮೂಲಕ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಹಾಳು ಖಾಯಿಲೆಗೆ ವಯಸ್ಸಿನ ಮಿತಿ ಇಲ್ಲ. ಯಾಕೆ ಡಾಕ್ಟ್ರೇ?*

ಮನುಜ ಕೋಳಿಮೊಟ್ಟೆ, ಚಿಕನ್ ತಿನ್ನುವಂತೆಯೇ ಬ್ಯಾಕ್ಟೀರಿಯಾ, ವೈರಸ್‌ಗಳೂ ಎಲ್ಲ ವಯಸ್ಸಿನ ದೇಹಗಳನ್ನು ಇಷ್ಟ ಪಡುವವಂತೆ.

ಹೆಚ್.ಎಸ್.ಸತ್ಯನಾರಾಯಣರಾವ್, ಅರಕಲವಾಡಿ

*ಪಕ್ಷಕ್ಕಾಗಿ ಹೋರಾಡುವವರು ರಾಜ್ಯದ ಒಳಿತನ್ನು ಮರೆತಿರುವರಲ್ಲಾ...?*

ಕಿಡಿ, ಕಿಡಿಗೇಡಿ ಹರಡಿದಾಗ ಕವಚಕ್ಕೆ ಕೇಡು ಕಟ್ಟಿಟ್ಟ ಬುತ್ತಿ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

ಓದುಗರ ಪ್ರಶ್ನೆಯಲ್ಲಿಯೇ *ಉತ್ತರವಿರುವಂತಹ ಒಂದು ಪ್ರಶ್ನೆ ಹೇಳಬಲ್ಲಿರಾ?*

ಸ್ವೀಕರಿಸಿ. ಪ್ರಶ್ನೆ – ನಾರದನ ಸಂಗೀತದ ವೈಶಿಷ್ಟ್ಯವೇನು?; ಉತ್ತರ – ನಾದ!

ಕೆ.ಯಂ. ವೀರೇಶ್, ಕೂಡ್ಲಿಗಿ

*ಮಂತ್ರವಾದಿ, ಬಾಬಾ, ಫಕೀರರ ಬಳಿ ನವಿಲುಗರಿಗಳ ಕಟ್ಟು ಇರಲು ಕಾರಣವೇನು?*

ಹೋದವರ ರೆಕ್ಕೆಪುಕ್ಕಗಳನ್ನೂ ಅದೇ ರೀತಿಯಲ್ಲಿ ಕತ್ತರಿಸಲಾಗುವುದು ಎಂಬ ಸೂಚನೆಯಂತೆ.

ವಿ. ಹೇಮಂತಕುಮಾರ್, ಬೆಂಗಳೂರು

*ಸುಳ್ಳಿನ ಬಳ್ಳಿ ಬೇಗನೆ ಬೆಳೆಯುತ್ತದೆ. ಏಕೆ?*

ಕಳ್ಳಕೆಲಸದ ಬೇರಿಗೆ ಭೀತಿಯ ನೀರು, ದುರಾಸೆಯ ಗೊಬ್ಬರ ಬೀಳುವುದರಿಂದ.

## ಬಹುಮಾನಿತ ಪ್ರಶ್ನೆ

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಷೇಧಿತ ನೋಟನ್ನು ದೇವರ ಹುಂಡಿಗೆ ಹಾಕಿದರೆ ಪುಣ್ಯ ದೊರೆಯುವುದೆ?*

ದೊರೆಯುತ್ತದೆ; ಆದರೆ ಅನುಭವಿಸುವುದಕ್ಕೆ ಮುನ್ನ ಬ್ಯಾನ್ ಆಗುತ್ತದೆ.

ಲತಾ ಸಜ್ಜನ, ಶಿರಸಿ

*ಜಗತ್ತಿಗೆ ಒಂದೇ ಭಾಷೆ, ಒಂದೇ ಧರ್ಮ, ಒಂದೇ ದೇಶ ಇದ್ದಿದ್ದರೆ ಚೆನ್ನಾಗಿರುತ್ತಿತ್ತಲ್ಲವೆ?*

ಹೆಣ್ಣಿಗೆ ಒಂದೇ ಕಲರ್, ಒಂದೇ ಡಿಸೈನ್, ಒಂದೇ ಕ್ವಾಲಿಟಿ ಡ್ರೆಸ್ ಇದ್ದರೆ ಚೆನ್ನ ಎಂದಂತಾಯಿತು!

ಪ್ರದೀಪ್ ಚಿತ್ರಗಾರ, ಹೆಸರೂರು

*ಕೆಲವೊಮ್ಮೆ ಕೆಲವರು ಇತರರಿಗೆ ಒಳ್ಳೆಯದು ಮಾಡಲು ಹೋಗಿ ತಾವೇ ಕೆಟ್ಟವರಾಗುತ್ತಾರಲ್ಲಾ...?*

ಒರೆಸುವ ಬಟ್ಟೆ ತಾನೇ ಕೊಳೆಯಾದೆನೆಂದು ಬೇಸರ ಪಡಲಾದೀತೆ? ಹತ್ತಿದ ಕೊಳೆ ಕಳೆದು ಮತ್ತೆ ಒರೆಸತೊಡಗಬೇಕು.

ಮಹಾವೀರ ಕಾಸರ, ಶಿವಮೊಗ್ಗ

*ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯ್ತು. ಅತ್ತೆ ಸೊಸೆಯರ ಜಗಳದಲ್ಲಿ?*

ಹೇರಳವಾಗಿ ಕಥೆಗಳು ದೊರಕಿ ಸೀರಿಯಲ್ಸ್ ಏಳಿದಾಯ್ತು.

ಹೆಚ್.ಎಸ್. ಅನೂರಾಧಾ, ಹಾಸನ

ಉದ್ಯೋಗಸ್ಥ ಮಹಿಳೆ ತನ್ನ ಮಕ್ಕಳನ್ನು ಚೆನ್ನಾಗಿ ಸಾಕಲು ಸಾಧ್ಯವೆ?



ಸಾಧ್ಯ. ಆದರೆ ಮಗುವಿನ ಮನದಲ್ಲಿ ಹೆತ್ತವಳು ಆಯಾ ಆಗುತ್ತಾಳೆ; ಆಯಾ ಅಮ್ಮ ಆಗುತ್ತಾಳೆ.

ಮುಕುಂದ ಹೆರಕಲ್ಲ, ಕಲಬುರ್ಗಿ

*ತಾಕತ್ತಿದ್ದರೆ ನನ್ನನ್ನು ಜೈಲಿಗೆ ಕಳಿಸಿ ಎಂದು ಕೆಲವು ರಾಜಕಾರಣಿಗಳು ಚಾಲೆಂಜ್ ಹಾಕುತ್ತಾರಲ್ಲಾ...?*

ಅವರ ಬಳಿ ‘ಈತ ದೊಡ್ಡ ಹುಚ್ಚ’ ಎಂಬ ಸರ್ಟಿಫಿಕೇಟ್ ಇದೆಯಂತೆ; ಹುಚ್ಚರ ಮೇಲೆ ಕೇಸ್ ನಿಲ್ಲುವುದಿಲ್ಲ!

■ ರಾಮ್